ಮಂಗಳೂರು ಆಳಿವೆ ಬಾಗಿಲಿನಲ್ಲಿ ಬ್ರೇಕ್ ವಾಟರ್ ಕೆಲಸದ ಬಗ್ಗೆ ಟೆಂಡರ್.

೧೮೨೨ ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಮಂಗಳೂರು ಆಳಿವೆ ಬಾಗಿಲಿನಲ್ಲಿ ಬ್ರೇಕ್ ವಾಟರ್ ಕೆಲಸಕ್ಕಾಗಿ ಟೆಂಡರ್ ಕರೆಯಲಾಗಿದೆಯೇ ?

(ಆ) ಈ ಕೆಲಸ ಇನ್ನೂ ಪ್ರಾರಂಭಿಸದೇ ಇರುವುದರಿಂದ ಸಮುದ್ರ ಕೊರೆತ ಉಂಟಾಗಿ ಉಳ್ಳಾಲದ ಕರಾವಳಿಯಲ್ಲಿ ಭಾರೀ ಹಾನಿಯಾದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಇ) ಈ ಬ್ರೇಕ್ ವಾಟರ್ ಕೆಲಸ ಪ್ರಾರಂಭಿಸಿ ಪರಿಪೂರ್ಣಗೊಳಿಸಲಾಗುವುದೇ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—

(ಅ) ಹೌದು. ಗುತ್ತಿಗೆಯನ್ನು ತೀರ್ಮಾನಿಸಲಾಗಿದೆ.

(ಆ) ಸರ್ಕಾರದ ಗಮನಕ್ಕೆ ಬಂದಿದೆ.

(ಇ) ಕಾಮಗಾರಿಯನ್ನು ಗುತ್ತಿಗೆದಾರರಿಗೆ ಪಹಿಸಲಾಗಿದ್ದು, ಶೀಘ್ರದಲ್ಲೇ ಪ್ರಾರಂಭ ಮಾಡಲಾಗುತ್ತದೆ.

ಮಂಗಳೂರು ಆಳಿವೆ ಬಾಗಿಲಲ್ಲಿ ಹೂಳೆತ್ತಲಾಗುವುದು

೧೮೧ ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಮಂಗಳೂರು ಆಳಿವೆ ಬಾಗಿಲಿನಲ್ಲಿ ಹೂಳೆತ್ತದೆ ಇರುವುದರಿಂದ ೧೯೮೮-೮೯, ೧೯೮೯-೯೦ನೇ ಸೆಪ್ಟೆಂಬರ್ ಅಂತ್ಯದವರೆಗೆ ಮುಳುಗಿ ಹೋದ ಬೋಟುಗಳ ಸಂಖ್ಯೆ ಎಷ್ಟು ?

(ಆ) ಆ ರೀತಿಯ ಹಾನಿಯಿಂದ ಉಂಟಾದ ನಷ್ಟವೆಷ್ಟು ?

(ಇ) ನಷ್ಟ ಹೊಂದಿದವರಿಗೆ ಸರ್ಕಾರ ಪರಿಹಾರ ಕೊಟ್ಟಿದೆಯೇ ? ಕೊಟ್ಟಿದ್ದಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ಪರಿಹಾರ ನೀಡಲಾಗಿದೆ ?

(ಈ) ಸಂಪೂರ್ಣ ಹೂಳೆತ್ತುವ ಕೆಲಸ ಯಾವಾಗ ಪರಿಪೂರ್ಣವಾಗುವುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—

(ಅ) ೧೯೮೮-೮೯ನೇ ವರ್ಷದಲ್ಲಿ ೧೪ ಬೋಟುಗಳು ಮತ್ತು ೧೯೮೯-೯೦ನೇ ಸೆಪ್ಟೆಂಬರ್ ಅಂತ್ಯದವರೆಗೆ ಎರಡು ಬೋಟುಗಳು ಮುಳುಗಿರುತ್ತವೆ.

(ಆ) ೧೯೮೮-೮೯ನೇ ಸಾಲಿನಲ್ಲಿ ರೂ. ೧೩.೨೦ ಲಕ್ಷ ಮತ್ತು ೧೯೮೯-೯೦ನೇ ಸಾಲಿನಲ್ಲಿ ಸೆಪ್ಟೆಂಬರ್ ತನಕ ರೂ. ೧೩.೦೦ ಲಕ್ಷ ನಷ್ಟ ಉಂಟಾಗಿರುತ್ತದೆ.

(ಇ) ದೋಣಿಗಳ ಮಾಲೀಕರಿಗೆ ಸರ್ಕಾರದಿಂದ ಯಾವುದೇ ಪರಿಹಾರವನ್ನು ನೀಡಿರುವುದಿಲ್ಲ.

(ಈ) ಆದಷ್ಟು ಶೀಘ್ರವಾಗಿ ಹೂಳೆತ್ತುವ ಕೆಲಸವನ್ನು ಕೈಗೆತ್ತಿಕೊಂಡು ಪರಿಪೂರ್ಣಗೊಳಿಸಲಾಗುವುದು.

ಮಂಗಳೂರಿನ ಕುಡಿಯುವ ನೀರಿನ ಪೂರೈಕೆಗೆ ತುಂಬೆಯಲ್ಲಿ ವೆಂಟೆಡ್ ಡ್ಯಾಂ

೧೮೩ ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ. —

(ಅ) ಮಂಗಳೂರಿನ ಕುಡಿಯುವ ನೀರಿನ ಪೂರೈಕೆಗೆ ತುಂಬೆಯಲ್ಲಿ ವೆಂಟೆಡ್ ಡ್ಯಾಂ ಕಟ್ಟುವ ಯೋಜನೆ ಏನಾದರೂ ಸರ್ಕಾರಕ್ಕೆ ಇದೆಯೇ ?

(ಆ) ಈ ಆಣೆಕಟ್ಟಿನ ಕೆಲಸ ಪ್ರಾರಂಭವಾಗಿದೆಯೇ ? ಹಾಗೂ ಈ ಯೋಜನೆಗೆ ಎಷ್ಟು ಹಣವನ್ನು ನಿಗದಿಗೊಳಿಸಲಾಗಿದೆ ?

(ಇ) ಈ ಆಣೆಕಟ್ಟಿನ ಕೆಲಸ ಎಷ್ಟು ಸಮಯದಲ್ಲಿ ಪೂರ್ಣಗೊಳ್ಳುವುದು ?

ಶ್ರೀ ಕೆ. ಜೆ. ಜಾರ್ಜ್ (ಪಸತಿ ಮತ್ತು ನಗರಾಭಿವೃದ್ಧಿ ಸಚಿವರು).—

(ಅ) ಹೌದು.

(ಆ) ಹೌದು. ರೂ. ೧೫೦ ಲಕ್ಷಗಳನ್ನು ನಿಗಧಿಗೊಳಿಸಲಾಗಿದೆ.

(ಇ) ಈ ಆಣೆಕಟ್ಟಿನ ಕೆಲಸವನ್ನು ಸಂಬಂಧಿಸಿದ ಫಲಾನುಭವಿಗಳು ಅಂದರೆ ಮಂಗಳೂರು ಮಹಾನಗರಪಾಲಿಕೆ, ಮಂಗಳೂರು ರಾಸಾಯನಿಕ ಮತ್ತು ಗೊಬ್ಬರ ಕಾರ್ಖಾನೆ, ನವಮಂಗಳೂರು ಬಂದರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಇತರರು ಸಕಾಲದಲ್ಲಿ ಹಣ ಒದಗಿಸಿದಲ್ಲಿ ಏಪ್ರಿಲ್-ಮೇ ೧೯೯೧ರಲ್ಲಿ ಪೂರ್ಣಗೊಳಿಸಲಾಗುವುದಾಗಿದೆ.

ವಿದ್ಯಾಪೀಠಗಳ ಮಂಜೂರಾತಿಗಾಗಿ ಬಂದ ಅರ್ಜಿಗಳ ಸಂಖ್ಯೆ

೧೯. ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಪ್ರಸಕ್ತ ಸಾಲಿನಲ್ಲಿ ವಿದ್ಯಾಪೀಠಗಳನ್ನು ಮಾಡುವ ಆಲೋಚನೆ ಸರ್ಕಾರಕ್ಕೆ ಇದೆಯೇ ;

(ಆ) ವಿದ್ಯಾಪೀಠಗಳ ಮಂಜೂರಾತಿಗಾಗಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ?

(ಇ) ಮೂಡಿಗೆರೆ ತಾಲ್ಲೂಕಿಗೆ ವಿದ್ಯಾಪೀಠದ ಸ್ಥಾಪನೆಯು ಬೇಡಿಕೆಯೇನಾದರೂ ಸರ್ಕಾರದ ಮುಂದಿದೆಯೇ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—

(ಅ) ಇಲ್ಲ.

(ಆ) ಎರಡು

(ಇ) ಮೂಡಿಗೆರೆ ತಾಲ್ಲೂಕು ಅಂಗಡಿ ಮಂಡಲ ಪಂಚಾಯಿತಿ ಪ್ರಧಾನರು ಜಿ. ಆಗ್ರಹಾರ ಗ್ರಾಮದಲ್ಲಿ ವಿದ್ಯಾಪೀಠವೊಂದನ್ನು ಸ್ಥಾಪಿಸಲು ಲೋಕ ಶಿಕ್ಷಣ ನಿರ್ದೇಶನಾಲಯಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ. ಆದು ಸದರಿ ನಿರ್ದೇಶನಾಲಯದ ಪರಿಶೀಲನೆಯಲ್ಲಿದೆ.

ಹರಿಜನವಾಡ ಯೋಜನೆಯಲ್ಲಿ ರಸ್ತೆ ಕಾಮಗಾರಿ

೧೮. ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದ ಮೇಲೆ ಹರಿಜನವಾಡಗಳಿಗೆ ರಸ್ತೆಗಳನ್ನು ನಿರ್ಮಿಸಲಾದ ಹರಿಜನವಾಡಗಳ ಸಂಖ್ಯೆ ಎಷ್ಟು ?

ಆ) ಆಗತ್ಯವಿರುವ ಹರಿಜನವಾಡಗಳ ಸಂಖ್ಯೆ ಎಷ್ಟು ?

ಇ) ಈ ಹೊಸಹಳ್ಳಿ ಹರಿಜನ ಕೇರಿಗೆ ಮಂಜೂರಾದ ಹರಿಜನವಾಡ ರಸ್ತೆಯನ್ನು ನಿರ್ಮಿಸಿದ ಕಾರಣವೇನು ? ಹಾಗೂ ಈ ರಸ್ತೆ ಬೇರೆ ಕಡೆ ಮಾಡಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು).—

ಅ) ೧೨ ಹರಿಜನವಾಡಾಗಳಿಗೆ ರಸ್ತೆಯ ನಿರ್ಮಿಸುವ ಕಾಮಗಾರಿಯನ್ನು ತೆಗೆದುಕೊಂಡಿದ್ದು ೪ ಕಾಮಗಾರಿಗಳು ಮುಗಿದಿದೆ ಮತ್ತು ೮ ಕಾಮಗಾರಿಗಳು ಪ್ರಗತಿಯಲ್ಲಿದೆ.

ಆ) ೨೫

ಇ) ಹೊಸಹಳ್ಳಿ ಹರಿಜನ ಕೇರಿಗೆ ರಸ್ತೆಯನ್ನು ಮಂಜೂರಾದ ಉದ್ದೇಶಿತ ಸ್ಥಳದಲ್ಲೇ ಮಾಡಲಾಗಿದೆ.